

# ಗೋಚಲಾ

## ಚಾರಣಿಗರ ಕನವರಿಕೆಯ ಕಣಿವೆ

**ಕಾಂಚನಜುಂಗಾ, ಪಾಂಡಿಮ್ ಸೇರಿ ಹಲವು ಹಿಮಪರ್ವತಗಳ ಸೊಬಗು, ಗಾಂಭೀರ್ಯ ಹಾಗೂ ಪ್ರಶಾಂತ ನೋಟ ದೊರಕಿಸಿಕೊಡುವ, ಪೂರ್ವ ಹಿಮಾಲಯದ ಹೃದಯ ಭಾಗದಲ್ಲಿರುವ 'ಗೋಚಲಾ' ಚಾರಣಿಗರು ಕನವರಿಸುವ ಕಣಿವೆ.**

**■ ಜಿ. ನಾಗೇಂದ್ರ ಕಾವೂರು**

ವಿಶ್ವದ ಮೂರನೇ ಅತಿ ಎತ್ತರದ ಶಿಖರವಾದ 'ಕಾಂಚನಜುಂಗಾ' ಅಲ್ಲದೆ 'ಪಾಂಡಿಮ್' ಮತ್ತು ಇತರೆ ಹಲವಾರು ಪರ್ವತ ಶಿಖರಗಳನ್ನು ಅತ್ಯಂತ ಸಮೀಪದಿಂದ ವೀಕ್ಷಿಸಬಹುದಾದ ಪ್ರದೇಶ 'ಗೋಚಲಾ' ಕಣಿವೆ. ಇಲ್ಲಿಗೆ ಚಾರಣ ನಡೆಸಲು ಚಾರಣಿಗರು ಹಾತೊರೆಯುತ್ತಾರೆ.

ಸಮುದ್ರ ಮಟ್ಟದಿಂದ 16,000 ಅಡಿಗಳಷ್ಟು ಎತ್ತರದಲ್ಲಿರುವ ಗೋಚಲಾ ಚಾರಣದ ಒಟ್ಟು ಅವಧಿ 10 ದಿನಗಳು. ಪಶ್ಚಿಮ ಸಿಕ್ಕಿಂನ ಮೊದಲ ರಾಜಧಾನಿ ಯುಕ್ಸೋಮ್ ಪಟ್ಟಣದಿಂದ ಚಾರಣ ಪ್ರಾರಂಭವಾಗುತ್ತದೆ. ಹೊಸಪೇಟೆ ರೈಲು ನಿಲ್ದಾಣದಿಂದ ಪ್ರಯಾಣ ಪ್ರಾರಂಭಿಸಿದ ನಮ್ಮ ತಂಡ, ಪಶ್ಚಿಮ ಬಂಗಾಳದ ನ್ಯೂ ಜಲ್ಪೈಗುರಿ ತಲುಪಿ, ಅಲ್ಲಿಂದ ಟ್ಯಾಕ್ಸಿ ಮೂಲಕ ಚಾರಣ ಪ್ರಾರಂಭವಾಗುವ ಬೇಸ್ ಕ್ಯಾಂಪ್ ಇರುವ ಯುಕ್ಸೋಮ್ ತಲುಪಿದೆವು. ಎತ್ತರ ಪ್ರದೇಶದ ವಾತಾವರಣಕ್ಕೆ ಹೊಂದಿಕೊಳ್ಳಲು ವಿಶ್ರಮಿಸುವ ದಿನಗಳನ್ನು ಹೊರತುಪಡಿಸಿದರೆ ಏಳು ದಿನಗಳ ಕಾಲ ಬೆಟ್ಟ ಗುಡ್ಡಗಳಲ್ಲಿ ಒಟ್ಟು ಸುಮಾರು 90 ಕಿ.ಮೀ. ಚಾರಣ ನಡೆಸಬೇಕಾಗುತ್ತದೆ. ಚಾರಣದ ಹಾದಿಯಲ್ಲಿ 'ಸಾಚೆನ್' (ಸಮುದ್ರ ಮಟ್ಟದಿಂದ 7400 ಅಡಿ ಎತ್ತರ), 'ತ್ಸೋಕಾ' (9790), 'ಜೋಂಗ್ರಿ ಟಾಪ್' (13190), 'ಥಾನ್ಸಿಂಗ್' (13190) ಶಿಬಿರಗಳಲ್ಲಿ ಒಟ್ಟು ಏಳು ದಿನಗಳ ಕಾಲ ತಂಗಬೇಕಾಗುತ್ತದೆ. 1784 ಚದರ ಕಿ.ಮೀ. ವಿಸ್ತೀರ್ಣವುಳ್ಳ ಶ್ರೀಮಂತ ಜೀವವೈವಿಧ್ಯಕ್ಕೆ ಹೆಸರುವಾಸಿಯಾಗಿರುವ ಮತ್ತು ಯುನೆಸ್ಕೊ ವಿಶ್ವ ಪರಂಪರೆಯ ತಾಣವಾದ 'ಕಾಂಚನಜುಂಗಾ ರಾಷ್ಟ್ರೀಯ ಉದ್ಯಾನವನ' ಗೋಚಲಾ ಚಾರಣದ ಹೆಬ್ಬಾಗಿಲು.

ಗೋಚಲಾ ಚಾರಣ ನಡೆಸಬೇಕಾದ ಜಾಡು ಕಾಂಚನಜುಂಗಾ ರಾಷ್ಟ್ರೀಯ ಉದ್ಯಾನವನದ ಮೂಲಕ ಹಾದು ಹೋಗುವಾಗ ಮೂರು ತೂಗು ಸೇತುವೆಗಳು ಮತ್ತು ರಾಥೋಂಗ್ ಹಿಮನದಿಯಿಂದ ಉಂಟಾದ ಜಲಪಾತಗಳು, ದಟ್ಟವಾದ ಕಾಡಿನ ಪ್ರಕೃತಿ ನಯನ ಮನೋಹರ. ಶಿಬಿರದಲ್ಲಿ ಟೆಂಟ್‌ಗಳನ್ನು ಹಾಕಲು ಬೇಕಾಗುವಂತಹ ಸಾಮಾನು ಸರಂಜಾಮುಗಳನ್ನು ಹಾಗೂ ಆಹಾರ ಸಾಮಗ್ರಿಗಳನ್ನು ಸಾಗಿಸಲು ಕುದುರೆ, ಹಸು ಮತ್ತು ಯಾಕ್‌ಗಳ ಮಿಶ್ರ ತಳಿಗಳಾದ 'ಜೋ'(DZO)ಗಳನ್ನು ಉಪಯೋಗಿಸುತ್ತಾರೆ. ಆಕಾಶವನ್ನು ಚುಂಬಿಸುವಷ್ಟು ಎತ್ತರಕ್ಕೆ ಬೆಳೆದಿರುವ ಬೃಹತ್ ಗಾತ್ರದ ಮರಗಳು, ಕಲ್ಲುಗಳಿಂದ ಕೂಡಿದ ದಾರಿಯಲ್ಲಿ ಅಲ್ಲಲ್ಲಿ ಕಾಣುವ ಪುಟ್ಟ ಜಲಪಾತಗಳ ನೀರನ್ನು ಕುಡಿದು ಬಾಯಾರಿಕೆ ನೀಗಿಸಿಕೊಂಡೆವು. ಚಾರಣದ ಪ್ರಾರಂಭದಲ್ಲಿ ಬೆಟ್ಟಗಳ ಬುಡದಲ್ಲಿದ್ದ

